<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು</u>

<u>C.C. No.4651/2024. PW 1.</u>

ದಿನಾಂಕ:**22.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು:</u>- ಆರೋಪಿ ಪರ ಶ್ರೀ ಹೆಚ್ ಹೆಚ್ ವಕೀಲರಿಂದ:-

ನಾನು ಕಡೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಎಂದರೆ ಸರಿ. ನಾನು 6 ವರ್ಷಗಳಿಂದ ಕಡೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ವ್ಯವಹಾರಿಕ ಜ್ಞಾನ ಇದೆ ಎಂದರೆ ಸರಿ. ದಿ:28.06.2022 ರಂದು 2 ಲಕ್ಷ, ದಿ:02.07.2022 ರಂದು 1 ಲಕ್ಷ ಒಟ್ಟು 3 ಲಕ್ಷ ಫೋನ್ ಪೇ ಮಾಡಿದ್ದೇನೆ. ದಿ:28.06.2022 ಮತ್ತು ದಿ:02.07.2022 ರಂದು ಹಣ ಪಾವತಿಸಿದ ಬಗ್ಗೆ ಫೋನ್ ಪೇ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಸದರಿ ದಾಖಲೆ ಹಾಜರುಪಡಿಸಿರದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ, ಸಾಕ್ಷಿ ಮುಂದುವರೆದು ನಾನು ಈಗಾಗಲೇ ವಕೀಲರಿಗೆ ನೀಡಿದ್ದೇನೆ ಎನ್ನುತ್ತಾರೆ.

ಆರೋಪಿ ಪೈಂಟರ್ ಎಂದರೆ ಸರಿ. ಅದರಂತೆ ಆರೋಪಿಯು ನಮ್ಮ ಪೊಲೀಸ್ ವಸತಿಗೃಹಕ್ಕೆ ಪೈಂಟಿಂಗ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಅದೇ ರೀತಿ ಕಡೂರು ನಗರದ ಕಲ್ಲುಗುಂಡಿ ನಗರದಲ್ಲಿನ ನಮ್ಮ ಬಾಡಿಗೆ ಮನೆಗೆ ಆರೋಪಿಯು ಪೈಂಟಿಂಗ್ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪೊಲೀಸ್ ವಸತಿಗೃಹಕ್ಕೆ ನನ್ನ ಕಡೆಯಿಂದ ಎಲ್ಲಾರಿಗೂ ಪೈಂಟಿಂಗ್ ಮಾಡಿಕೊಡುತ್ತಿದ್ದರು ಎಂದರೆ ಸರಿ. ಸದರಿ ಪೈಂಟಿಂಗ್ ಮಾಡಿದ ಸಂಬಂಧ ದಿ:28.06.2022 ರಂದು ತಲಾ 50,000/- ರಂತೆ 2 ಬಾರಿ ಫೋನ್‌ಪೇ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ವೈಯಕ್ತಿಕ ವ್ಯವಹಾರವಾಗಿದೆ ಎನ್ನುತ್ತಾರೆ. ಅದೇ ರೀತಿ ಕಲ್ಲುಗುಂಡಿ ನಗರದ ನನ್ನ ಬಾಡಿಗೆ ಮನೆಗೆ ಪೈಂಟಿಂಗ್ ಮಾಡಲು ದಿ:02.07.2022 ರಂದು ಒಮ್ಮೆ 50 ಸಾವಿರ ಮತ್ತು ಇನ್ನೊಮ್ಮೆ 30 ಸಾವಿರ ಫೋನ್ ಪೇ ಮಾಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಪೈಂಟಿಂಗ್ ಮಾಡುವ ಭದ್ರತೆಗಾಗಿ ಆರೋಪಿಯಿಂದ 4 ಚೆಕ್ ಗಳನ್ನು ನಾನು ಪಡೆದಿದ್ದೆ ಎಂದರೆ ಸರಿಯಲ್ಲ. ಆದರೆ ಆರೋಪಿಯು ನಿಗಧಿತ ಅವಧಿಯಲ್ಲಿ ಪೈಂಟಿಂಗ್ ಕೆಲಸ ಮುಗಿಸಿದ ಕಾರಣ ಆರೋಪಿ ಮತ್ತು ನನ್ನ ನಡುವೆ ಜಗಳವಾಗಿದೆ ಎಂದರೆ ಸರಿಯಲ್ಲ. ಆರೋಪಿಯು ವ್ಯವಹಾರ ಮುಗಿದಿದ್ದರು ಚೆಕ್ ಗಳನ್ನು ಹಿಂದಿರುಗಿಸಿಲ್ಲ ಎಂದು ನನ್ನ ವಿರುದ್ಧ ದೂರು ದಾಖಲು ಮಾಡಲು ಹಲವಾರು ಠಾಣೆಗೆ ಹೋಗಿದ್ದರು ನನ್ನ ಮತ್ತು ಠಾಣಾಧಿಕಾರಿಯ ವಿಶ್ವಾಸದಿಂದ ಸದರಿ ದೂರು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಠಾಣೆಗೆ ಬಂದಿರುವುದಿಲ್ಲ ಎನ್ನುತ್ತಾರೆ.

ಆರೋಪಿಯು ನನಗೆ 5 ವರ್ಷದಿಂದ ಪರಿಚಯವಿದ್ದಾರೆ. ಆರೋಪಿಗೆ 5 ಲಕ್ಷ ಸಾಲ ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು 3 ಲಕ್ಷ ಫೋನ್ ಪೇ ಮಾಡಿದ್ದು 2 ಲಕ್ಷ ನಗಧು ನೀಡಿದ್ದೇನೆ ಎನ್ನುತ್ತಾರೆ. ಸಾಮಾನ್ಯವಾಗಿ ವ್ಯವಹಾರಿಕ ಜ್ಞಾನ ಇರುವವರು 2 ಲಕ್ಷ ಹಣವನ್ನು ಸಾಲವಾಗಿ ನೀಡುವುದಿಲ್ಲ ಎಂದರೆ ಸರಿಯಲ್ಲ. ನಾನು 3 ಲಕ್ಷ ಫೋನ್ ಅಥಾವ 2 ಲಕ್ಷ ನಗಧನ್ನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ಬಿ ಪಿ ಎಲ್ ಕಾರ್ಡ್ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಪೈಂಟಿಂಗ್ ಹೊರತು ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ತೋಟ ಮತ್ತು ಜಮೀನು ಹೊಂದಿದ್ದಾರೆ ಎನ್ನುತ್ತಾರೆ. ಸದರಿಯವರು ತೋಟ ಜಮೀನು ಹೊಂದಿರುವ ಬಗ್ಗೆ ದಾಖಲೆ ನೋಡಿಲ್ಲ ಆದರೆ ಊರಿನವರನ್ನು ಕೇಳಿ ತಿಳಿದುಕೊಂಡಿರುತ್ತೇನೆ.

ಆರೋಪಿಯು ಕಡೂರಿನ ಗೋವಿಂದಪುರ ಗ್ರಾಮದವರು. ಆರೋಪಿಯು ತೋಟ ಮತ್ತು ಜಮೀನು ಹೊಂದಿರುವ ಬಗ್ಗೆ ಗೋವಿಂದಪುರ ಗ್ರಾಮದ ಮಂಜಾನಾಯ್ಕ ರವರು ಹೇಳಿರುತ್ತಾರೆ. ಆ ಬಗ್ಗೆ ದಾಖಲೆ ಪಡೆದುಕೊಳ್ಳಲು ತೊಂದರೆ ಇತ್ತೆ ಎಂದರೆ ಇರಲಿಲ್ಲ ಎನ್ನುತ್ತಾರೆ. ಆರೋಪಿಯು ನಾನು ಹೇಳಿದಂತೆ ಯಾವುದೇ ತೋಟ ಜಮೀನು ಹೊಂದಿರದೆ ಕೇವಲ ಪೈಂಟಿಂಗ್ ಮಾಡುತ್ತಾ ಕೂಲಿ ಮಾಡುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಕೂಲಿ ಕೆಲಸ ಮಾಡುತ್ತಿದ್ದು 5 ಲಕ್ಷ ಸಾಲ ಪಡೆಯುವ ಸಾಮರ್ಥ್ಯ ಇರದಿದ್ದರು ಅವರ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಪ್ರಶ್ನೆ: ನೀವು ಆರೋಪಿಗೆ ಸಾಲ ಕೊಟ್ಟ ಬಗ್ಗೆ ನಿಮ್ಮ ಆದಾಯ ತೆರಿಗೆ ಪಾವತಿಯಲ್ಲಿ ನಮೂದು ಮಾಡಿದ್ದೀರಾ. ಉತ್ತರ : ಇಲ್ಲ.

ನ್ಯಾಯಾಲಯದ ಪ್ರಶ್ನೆ: ಸದರಿ ವಿಚಾರವನ್ನು ನಮೂದಿಸಲು ತೊಂದರೆ ಇತ್ತೆ.

ಉತ್ತರ:-ಇಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕೊನೆಯ ಕಾಲವಕಾಶ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.